ದಿನಾಂಕಃ 06-09-2022 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಹೆಚ್ ಟಿ ಎಸ್ ಕೆ ವಕೀಲರಿಂದಃ

14. ನಿಮ್ಮ ಅಣ್ಣನಾದ ಆರೋಪಿ ಹಿಂದಿನಿಂದಲೂ ಮಾನಸಿಕ ರೋಗಿಯಾಗಿದ್ದನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತ ಮದ್ಯಪಾನ ಮಾಡುತ್ತಿದ್ದನು ಮತ್ತು ಸಿಗರೇಟ್ ನ್ನು ಸೇದುತ್ತಿದ್ದನು ಅದನ್ನು ಹೊರತುಪಡಿಸಿ ಆತನಿಗೆ ಬೇರೆ ಯಾವುದೇ ಮಾನಸಿಕ ಖಾಯಿಲೆ ಇರಲಿಲ್ಲ ಎನ್ನುತ್ತಾರೆ. ನಮ್ಮ ಸ್ವಂತ ಊರು ಇಂದಾವರ. ನನ್ನ ತಂದೆ 2010 ನೇ ಇಸವಿಯಲ್ಲಿ ಬೈಕ್ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಸದರಿ ಅಪಘಾತದ ಬಗ್ಗೆ ನನ್ನ ತಾಯಿ, ನಾನು ಮತ್ತು ಆರೋಪಿ ಪರಿಹಾರ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಆ ಬಗ್ಗೆ ನಮಗೆ 10 ಲಕ್ಷ ರೂಪಾಯಿ ಪರಿಹಾರವನ್ನು ನೀಡುವಂತೆ ನ್ಯಾಯಾಲಯ ಆದೇಶಿಸಿತ್ತು. ಆ ಪ್ರಕರಣದಲ್ಲಿ ನಮಗೆ ರೂ.30 ಲಕ್ಷಕ್ಕೂ ಹೆಚ್ಚು ಪರಿಹಾರವನ್ನು ನ್ಯಾಯಾಲಯ ನೀಡಲು ಆದೇಶಿಸಿತ್ತು ಎಂದರೆ ಸರಿಯಲ್ಲ.

15. 2010 ನೇ ಇಸವಿಯಲ್ಲಿ ನನ್ನ ತಂದೆ ಮೃತಪಟ್ಟ

ಸಮಯದಲ್ಲಿ ನಾನು, ನನ್ನ ತಾಯಿ ಮತ್ತು ಆರೋಪಿ ಬೆಂಗಳೂರಿನಲ್ಲಿ ವಾಸವಿದ್ದೆವು. ಇಂದಾವರ ಗ್ರಾಮದಲ್ಲಿ ನನ್ನ ತಂದೆಗೆ ಸೇರಿದ 2 ಎಕರೆ ಜಮೀನು ಮತ್ತು ಒಂದು ಮನೆ ಇದೆ. ಸದರಿ ಮನೆಯನ್ನು ನನ್ನ ತಾಯಿ ಮೃತಪಟ್ಟ ಬಳಿಕ ನಾನು ರಿಪೇರಿ ಮಾಡಿಸಿದ್ದೇನೆ. ಮೊದಲಿಗೆ ಸದರಿ ಮನೆಗೆ ಕೇವಲ ಗೋಡೆ ಮಾತ್ರ ಇತ್ತು ಆರೋಪಿ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಫೇಲ್ ಆದ ಬಳಿಕ ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದನು ಎಂದರೆ ಸರಿಯಲ್ಲ. ಆರೋಪಿ 2011 ನೇ ಇಸವಿಯಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಫೇಲ್ ಆಗಿದ್ದಾನೆ. 2018 ನೇ ಇಸವಿಯಿಂದ ನಿಮ್ಮ ತಾಯಿ ಆರೋಪಿಗೆ ಚಿಕಿತ್ಸೆ ಕೊಡಿಸುತ್ತಿದ್ದರು ಎಂದರೆ ಸಾಕ್ಷಿ ಆತನಿಗೆ ಯಾವುದೇ ಖಾಯಿಲೆ ಇರಲಿಲ್ಲ ಆದರೆ ಆತನ ಕುಡಿತ ಮತ್ತು ಸಿಗರೇಟನ್ನು ಬಿಡಿಸುವ ಸಲುವಾಗಿ ಚಿಕಿತ್ಸೆ ಕೊಡಿಸುತ್ತಿದ್ದರು ಎನ್ನುತ್ತಾರೆ. ನಾನು ಆರೋಪಿಯನ್ನು ಎಂದಿಗೂ ಆಸ್ಪತ್ರೆಗೆ ಕರೆದುಕೊಂಡಿಲ್ಲ. ನನ್ನ ತಾಯಿ ಆರೋಪಿಯನ್ನು ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ತೋರಿಸುತ್ತಿದ್ದರು ಆದರೆ ಯಾವ ವೈದ್ಯರ ಬಳಿ ತೋರಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

16. ಆರೋಪಿ ಈ ಪ್ರಕರಣದಲ್ಲಿ ಜೈಲಿಗೆ ಹೋದ ಬಳಿಕ ಯಾರಾದರೂ ಆರೋಪಿಗೆ ಮಾನಸಿಕ ಖಾಯಿಲೆ ಇದ್ದ ಬಗ್ಗೆ ದಾಖಲೆಯನ್ನು ನೀಡುವಂತೆ ಕೇಳಿದ್ದಾರೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮಾನ್ಸ್‌ನಿಂದ ವೈದ್ಯರು ನಿಮಗೆ ಕರೆ ಮಾಡಿದ್ದರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆರೋಪಿ ಜೈಲಿಗೆ ಹೋದ ಬಳಿಕ ನಾನು ಒಂದು ಬಾರಿ ಆತನನ್ನು ನೋಡಿಕೊಂಡು ಬಂದಿದ್ದೇನೆ. ಆ ಸಮಯದಲ್ಲಿ ನೀವು ಆರೋಪಿಯ ಆರೋಗ್ಯದ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮಾನ್ಸ್‌ನ ವೈದ್ಯರು ನಿಮಗೆ ಯಾವ ವಿಚಾರಕ್ಕೆ ಕರೆ ಮಾಡಿದ್ದರು ಎಂದು ತಿಳಿದುಕೊಂಡಿರೇ ಎಂದರೆ ಸಾಕ್ಷಿ ಆರೋಪಿಯ ವಿಧ್ಯಾಭ್ಯಾಸ ಮತ್ತು ಆತನ ವರ್ತನೆಯ ಬಗ್ಗೆ ಮತ್ತು ಆತನಿಗೆ ಯಾವುದಾದರೂ ಖಾಯಿಲೆ ಇತ್ತೇ ಎಂದು ಕೇಳಿದರು ಆಗ ನಾನು ಅವರಿಗೆ ಆರೋಪಿ ಹತ್ತನೇ ತರಗತಿ ಫೇಲ್ ಆದ ಬಳಿಕ ಯಾವುದೇ ಕೆಲಸಕ್ಕೆ ಹೋಗದೇ ಮನೆಯಲ್ಲಿಯೇ ಇದ್ದುಕೊಂಡು ಮಧ್ಯಪಾನ ಮಾಡುವುದು ಸಿಗರೇಟ್ ಸೇದುವುದನ್ನು ಮಾಡುತ್ತಿದ್ದನು ಮತ್ತು ಆತನಿಗೆ ಯಾವುದೇ ಖಾಯಿಲೆ ಇರಲಿಲ್ಲ ಎಂದು ತಿಳಿಸಿದ್ದೇನೆ ಎನ್ನುತ್ತಾರೆ.

17. ನಿಮ್ಮ ತಾಯಿ ಆರೋಪಿಯ ಮಾನಸಿಕ ಸ್ಥಿತಿ ಸರಿ

ಇಲ್ಲದ ಕಾರಣ ಚಿಕಿತ್ಸೆಗಾಗಿ ಆತನನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಮನೋ ವೈದ್ಯರ ಬಳಿ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಯ ಮಾನಸಿಕ ಸ್ಥಿತಿ ಸರಿ ಇಲ್ಲದ ಕಾರಣ ನಿಮ್ಮ ತಾಯಿ ಆತನನ್ನು ಕೆಲಸಕ್ಕೆ ಕಳುಹಿಸದೇ ಮನೆಯಲ್ಲಿಯೇ ಇರಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಇಂದಾವರ ಗ್ರಾಮದಲ್ಲಿರುವ ನಿಮ್ಮ ಜಮೀನು 1 ಕೋಟಿಗೂ ಅಧಿಕ ಬೆಲೆ ಬಾಳುತ್ತದೆ ಎಂದರೆ ಸರಿ. ನೀವು ಬೆಂಗಳೂರಿನಲ್ಲಿ ವಾಸವಾಗಿದ್ದಿರಿ ಮತ್ತು ನಿಮ್ಮ ತಾಯಿ ಮತ್ತು ಆರೋಪಿ ಒಟ್ಟಿಗೆ ಚಿಕ್ಕಮಗಳೂರಿನಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ.

18. ನಿಮ್ಮ ತಾಯಿ ಮೃತಪಟ್ಟರು ಎಂದು ಹೇಳಿದ ದಿನ ಆರೋಪಿ ಮನೆಯಲ್ಲಿ ಇರಲಿಲ್ಲ ಮತ್ತು ಆ ಸಮಯದಲ್ಲಿ ನೀವು ನಿಮ್ಮ ತಾಯಿಯೊಂದಿಗೆ ಮನೆಯಲ್ಲಿ ಇದ್ದಿರಿ ಎಂದರೆ ಸರಿಯಲ್ಲ. ಆ ದಿನ ನೀವು ಹೋಲಿಕ್ರಾಸ್ ಆಸ್ಪತ್ರೆಗೆ ಹೋಗಿದ್ದ ಬಗ್ಗೆ ಪೊಲೀಸರು ಯಾವುದಾದರೂ ದಾಖಲೆಯನ್ನು ಪಡೆದುಕೊಂಡಿದ್ದಾರೆಯೇ ಎಂದರೆ ಸಾಕ್ಷಿ ದಾಖಲೆಯನ್ನು ಪಡೆದುಕೊಂಡಿದ್ದಾರೆ ಮತ್ತು ನಾವು ಸದರಿ ಆಸ್ಪತ್ರೆಗೆ ಕರೆದುಕೊಂಡು ಹೋದವರನ್ನು ಪೊಲೀಸರು ವಿಚಾರಿಸಿದ್ದಾರೆ ಎನ್ನುತ್ತಾರೆ. ನನ್ನ ವಾರ್ಷಿಕ ಸಂಬಳ ರೂ.2,90,000/-. ಕೃತ್ಯ

ನಡೆದಿದೆ ಎನ್ನಲಾದ ಮನೆ ಇರುವ ಕಟ್ಟಡದಲ್ಲಿ ಒಟ್ಟು 7 ಮನೆಗಳಿವೆ ಎಂದರೆ ಸಾಕ್ಷಿ 6 ಮನೆಗಳಿವೆ ಎನ್ನುತ್ತಾರೆ. ಸದರಿ ಕಟ್ಟಡದ ಕೆಳಗಿನ ಮಹಡಿಯಲ್ಲಿ ಅಂಗಡಿಗಳಿವೆ ಎಂದರೆ ಸರಿ.

19. ಆರೋಪಿ ಟಿ.ವಿ ನೋಡುವುದು, ಮೊಬೈಲ್ ನೋಡುವುದು ಮತ್ತು ಕುಡಿಯುವುದನ್ನು ಮಾಡುತ್ತಿದ್ದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ನಿಮ್ಮ ತಾಯಿಯ ಬಳಿ ಗಲಾಟೆ ಮಾಡಿ ಹಣವನ್ನು ಪಡೆದುಕೊಳ್ಳುತ್ತಿದ್ದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

20. ದಿನಾಂಕ 23.09.2021 ರಂದು ಬೆಳಿಗ್ಗೆ 8.30 ಗಂಟೆಗೆ ನೀವು, ನಿಮ್ಮ ತಾಯಿ ಮತ್ತು ಆರೋಪಿ ಒಟ್ಟಿಗೆ ಹಿರೇಮಗಳೂರು ಬಳಿ ಇರುವ ಕೊರಗಜ್ಜ ದೇವಸ್ಥಾನಕ್ಕೆ ಹೋಗಿದ್ದೀರಿ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ದಿನ ಆರೋಪಿ ಒಬ್ಬನನ್ನೇ ಮನೆಯಲ್ಲಿ ಬಿಟ್ಟು ನೀವು ಮತ್ತು ನಿಮ್ಮ ತಾಯಿ ದೇವಸ್ಥಾನಕ್ಕೆ ಹೋಗಿದ್ದಿರಿ ಎಂದರೆ ಸರಿಯಲ್ಲ. ಆ ದಿನ ಬೆಳಿಗ್ಗೆ 11.30 ಗಂಟೆಗೆ ನೀವು ಮನೆಗೆ ವಾಪಾಸ್ಸು ಬಂದಾಗ ಆರೋಪಿ ಹೊರಗೆ ಹೋಗಿದ್ದನು ಎಂದರೆ ಸರಿಯಲ್ಲ. ಆಗ ನೀವು ಮತ್ತು ನಿಮ್ಮ ತಾಯಿ ನಿಮ್ಮ ಮನೆಯಲ್ಲಿ ಇದ್ದಿರಿ ಎಂದರೆ ಸರಿಯಲ್ಲ.

21. ಚಾಸಾ.14 ಸಂಜಯ್ ನಿಮ್ಮ ಸ್ನೇಹಿತ ಎಂದರೆ ಸರಿ.

ಚಾಸಾ.15 ಮಮತಾ ಸಂಜಯ್ ರವರ ಆಂಟಿಯಾಗಿದ್ದು, ಆತ ಆಕೆಯ ಮನೆಯಲ್ಲಿ ತಿಂಗಳಿಗೆ ಒಂದಿಷ್ಟು ಹಣವನ್ನು ಕೊಟ್ಟು ಅಲ್ಲಿಯೇ ಉಳಿದುಕೊಂಡಿದ್ದನು. ಚಾಸಾ.14 ರವರಿಗೆ ಚಾಸಾ.15 ರವರು ದೂರದ ಸಂಬಂಧಿ. ಚಾಸಾ.15 ರವರು ಪಿ.ಜಿಯನ್ನು ನಡೆಸುವುದಿಲ್ಲ ಆದರೆ ಚಾಸಾ.14 ರವರು ಅಲ್ಲಿ ಉಳಿದುಕೊಂಡಿದ್ದರಿಂದ ನಾನು ಪಿ.ಜಿ ಆಂಟಿ ಎಂದು ತಿಳಿದುಕೊಂಡಿದ್ದೆನು. ಚಾಸಾ.15 ರವರ ಮನೆಯಲ್ಲಿ ಅವರ ಮಕ್ಕಳು, ಒಂದು ಅಜ್ಜಿ, ಚಾಸಾ.14 ಮತ್ತು ಇನ್ನೂ ಇಬ್ಬರು ಸಂಬಂಧಿಕರು ಇರುತ್ತಾರೆ. ಆ ರೀತಿ ಇದ್ದ ಇಬ್ಬರು ಸಂಬಂಧಿಕರು ಸಹ ಓದುವ ಸಲುವಾಗಿ ಅಲ್ಲಿ ಉಳಿದುಕೊಂಡಿದ್ದರು.

22. ಆ ದಿನ ಚಾಸಾ.14 ರವರು ನಮ್ಮ ಮನೆಯ ಬಳಿ ಬಂದು ಚಾಸಾ.15 ರವರಿಗೆ ಹುಷಾರಿಲ್ಲವೆಂದು ಹೇಳಿ ನನ್ನನ್ನು ಕರೆದುಕೊಂಡು ಹೋದನು. ಆ ದಿನ ನಾನು ಮತ್ತು ಚಾಸಾ.14 ರವರು ಬೆಳಿಗ್ಗೆ 11.30 ಗಂಟೆಗೆ ಮನೆಯಿಂದ ಹೊರೆಟೆವು ಮತ್ತು ಚಾಸಾ.15 ರವರನ್ನು ಕರೆದುಕೊಂಡು ಮಧ್ಯಾಹ್ನ 12.00 ಗಂಟೆಗೆ ಚಿಕ್ಕಮಗಳೂರಿನ ಹೋಲಿಕ್ರಾಸ್ ಆಸ್ಪತ್ರೆಗೆ ಹೋದೆವು. ಸದರಿ ಆಸ್ಪತ್ರೆಯಲ್ಲಿ ಆ ದಿನ ಮಧ್ಯಾಹ್ನ 3.45 ಗಂಟೆಯಿಂದ 4.00 ಗಂಟೆಯವರೆಗೆ ಇದ್ದೆವು. ಸದರಿ ಆಸ್ಪತ್ರೆಯಲ್ಲಿ ನಾವು ಆ ಸಮಯದವರೆಗೆ ಇದ್ದ ಬಗ್ಗೆ ಪೊಲೀಸರಿಗೆ ತಿಳಿಸಿದ್ದೇನೆ. ನಂತರ ನಾನು ಮತ್ತು ಚಾಸಾ.14 ರವರು ಹೊರಗೆ ಊಟ ಮಾಡಿಕೊಂಡು ನಮ್ಮ ಮನೆಗೆ ಹೋದೆವು. ನಾವು ಮನೆಗೆ

ಹೋದಾಗ ಸಂಜೆ 5.30 ಗಂಟೆ ಆಗಿತ್ತು. ನಾವು ಮನೆಗೆ ಹೋದಾಗ ಮನೆಯ ಬಾಗಿಲು ಒಳಗಿನಿಂದ ಲಾಕ್ ಆಗಿತ್ತು.

23. ನೀವು ಹೇಳಿದಂತೆ ನೀವು ಹೋಲಿ ಕ್ರಾಸ್ ಆಸ್ಪತ್ರೆಗೆ ಹೋಗಿರಲಿಲ್ಲ ಮತ್ತು ನೀವು ಮನೆಗೆ ಹೋದಾಗ ಮನೆಯ ಬಾಗಿಲು ಲಾಕ್ ಆಗಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಹೊರಗೆ ಹೋಗಿದ್ದ ಆರೋಪಿ ಸಂಜೆ 5.45 ಗಂಟೆಗೆ ಮನೆಗೆ ವಾಪಾಸ್ಸು ಬಂದಾಗ ನೀವು ಮನೆಯಲ್ಲಿ ಇದ್ದಿರಿ ಮತ್ತು ನಿಮ್ಮ ತಾಯಿ ಮೃತಪಟ್ಟಿದ್ದರು ಎಂದರೆ ಸರಿಯಲ್ಲ.

24. ನಿಮ್ಮ ತಾಯಿಯ ತಲೆಯ ಹಿಂಭಾಗ, ಮುಖದ ಮೇಲೆ ಮತ್ತು ಬಲಕಿವಿಯ ಬಳಿ ರಕ್ತ ಬರುತ್ತಿತ್ತು, ಆಕೆಯ ಬಲಕಿವಿ ಹರಿದು ಹೋಗಿತ್ತು ಎಂದು ಹೇಳಿದ್ದಿರಿ ಅದು ನೀವು ನಿಮ್ಮ ತಾಯಿಯ ಮೇಲೆ ಹಲ್ಲೆ ಮಾಡಿದಾಗ ಆದ ಗಾಯಗಳು ಎಂದರೆ ಸರಿಯಲ್ಲ. ನಿಮಗೆ ಶೋಕಿ ಮಾಡುವ ಚಟ ಇದೆ ಎಂದರೆ ಸರಿಯಲ್ಲ. ಇಂದಾವರ ಗ್ರಾಮದಲ್ಲಿರುವ ಜಮೀನನ್ನು ಮಾರಿ ಬೈಕು, ಕಾರು ತೆಗೆದುಕೊಳ್ಳಲು ಮತ್ತು ಶೋಕಿ ಮಾಡಲು ಹಣವನ್ನು ಕೊಡುವಂತೆ ನಿಮ್ಮ ತಾಯಿಯನ್ನು ಪೀಡಿಸುತ್ತಿದ್ದಿರಿ ಎಂದರೆ ಸರಿಯಲ್ಲ. ನಿಮಗೆ ಕುಡಿಯುವ ಮತ್ತು ಗಾಂಜಾ ಸೇವಿಸುವ ಅಭ್ಯಾಸವಿದೆ ಎಂದರೆ ಸರಿಯಲ್ಲ. ಜಮೀನನ್ನು ಮಾರಿ ಹಣವನ್ನು ಕೊಡುವಂತೆ ನಿಮ್ಮ ತಾಯಿಯನ್ನು ನೀವು ಬೆಂಗಳೂರಿನಿಂದ ಬಂದಾಗಲೆಲ್ಲಾ ಪೀಡಿಸುತ್ತಿದ್ದಿರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು

ಚಿಕ್ಕಮಗಳೂರಿನಲ್ಲಿಯೇ ನನ್ನ ತಾಯಿ ಮತ್ತು ಆರೋಪಿಯೊಂದಿಗೆ ಇದ್ದೆನು, ನಾನು ಬೆಂಗಳೂರಿಗೆ ಶಿಫ್ಟ್ ಆಗಿದ್ದು 2022 ನೇ ಇಸವಿ ಏಪ್ರಿಲ್ ತಿಂಗಳಿನಲ್ಲಿ ಎನ್ನುತ್ತಾರೆ. 2022 ನೇ ಇಸವಿ ಏಪ್ರಿಲ್ ತಿಂಗಳಿಗಿಂತ ಮೊದಲು ನಾನು ಬೆಂಗಳೂರಿನಲ್ಲಿ ವಾಸವಾಗಿರಲಿಲ್ಲ.

25. ಜಮೀನು ಮಾರಿ ಹಣವನ್ನು ಕೊಡುವಂತೆ ನೀವು ನಿಮ್ಮ ತಾಯಿಯನ್ನು ಪೀಡಿಸುತ್ತಿದ್ದ ವಿಚಾರದಲ್ಲಿ ನಿಮ್ಮ ಅಕ್ಕಪಕ್ಕದ ಮನೆಯವರು ಹಲವಾರು ಬಾರಿ ಪಂಚಾಯ್ತಿ ಮಾಡಿ ನಿಮಗೆ ಬುದ್ಧಿ ಹೇಳಿದ್ದಾರೆ ಎಂದರೆ ಸಾಕ್ಷಿ ನಾನು ನನ್ನ ತಾಯಿಯೊಂದಿಗೆ ಯಾವುದೇ ವಿಚಾರಕ್ಕೆ ಜಗಳ ಮಾಡಿಲ್ಲ ಮತ್ತು ಆ ಬಗ್ಗೆ ಯಾವುದೇ ಪಂಚಾಯ್ತಿ ನಡೆದಿಲ್ಲ ಎನ್ನುತ್ತಾರೆ. ನಿಮ್ಮ ತಾಯಿ ಜಮೀನನ್ನು ಮಾರಲು ಒಪ್ಪದಿದ್ದ ಕಾರಣ ನೀವು ಮನೆಯನ್ನು ಬಿಟ್ಟು ಹೋಗಿದ್ದಿರಿ ಎಂದರೆ ಸರಿಯಲ್ಲ.

26. ಬಾಗಿಲಿನ ಬಳಿ ಇದ್ದ ಹಸಿರು ಬಣ್ಣದ ಡೋರ್ ಮ್ಯಾಟ್, ಬಾಗಿಲು, ನೆಲದ ಟೈಲ್ಸ್ ಮತ್ತು ಬಾಗಿಲಿನ ಪಕ್ಕದ ಗೋಡೆಗೆ ರಕ್ತದ ಕಲೆಗಳು ಆಗಿದ್ದವು ಮತ್ತು ನೆಲದಿಂದ ಅರ್ಧದಿಂದ ಒಂದು ಅಡಿ ಅಂತರದಲ್ಲಿ ಗೋಡೆಗೆ ರಕ್ತದ ಕಲೆಗಳು ಆಗಿದ್ದವು ಎಂದು ಹೇಳಿದ್ದಿರಿ ಸದರಿ ಕಲೆಗಳು ನೀವು ನಿಮ್ಮ ತಾಯಿಯ ಮೇಲೆ ಹಲ್ಲೆ ಮಾಡಿದಾಗ ಆದಂತಹ ಕಲೆಗಳು ಎಂದರೆ ಸರಿಯಲ್ಲ. ನಿಮ್ಮ ತಾಯಿಯ ಕಣ್ಣುಗಳು, ಕೆನ್ನೆ, ಬಾಯಿ, ಭುಜ ಮತ್ತು ಕುತ್ತಿಗೆಯಲ್ಲಿ ರಕ್ತದ ಗಾಯಗಳು, ಹಿಸುಕಿದಂತಹ ಮತ್ತು

ಗುದ್ದಿದಂತಹ ಗಾಯಗಳು ಆಗಿದ್ದವು ಎಂದು ಹೇಳಿದ್ದಿರಿ ಅವುಗಳನ್ನು ನೀವೇ ಮಾಡಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದ ಕೆಲಸಗಳನ್ನು ಆರೋಪಿ ಚಾಚು ತಪ್ಪದೇ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿ ಅಲ್ಲಿಯೇ ನಿಂತುಕೊಂಡಿದ್ದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ದಿನ ನೀವು ದೇವಸ್ಥಾನಕ್ಕೆ ಹೋಗುವ ಸಮಯದಲ್ಲಿ ಆರೋಪಿ ಧರಿಸಿದ್ದ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ನೀಲಿ ಮತ್ತು ಹಸಿರು ಬಣ್ಣ ಮಿಶ್ರಿತ ಚೆಕ್ಸ್ ಶರ್ಟ್ ಗೆ ರಕ್ತದ ಕಲೆಗಳಾಗಿದ್ದು ಅದನ್ನು ಆತ ಬಿಚ್ಚಿ ಒಂದು ಕವರ್ ನಲ್ಲಿ ಹಾಕಿ ಅಡುಗೆ ಮನೆಯ ಮೂಲೆಯಲ್ಲಿ ಇಟ್ಟು ನಂತರ ನೈಟ್ ಪ್ಯಾಂಟ್ ಮತ್ತು ಶರ್ಟ್ ನ್ನು ಹಾಕಿಕೊಂಡಿದ್ದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಬಟ್ಟೆಗಳು ಘಟನಾ ಸಮಯದಲ್ಲಿ ನೀವು ಧರಿಸಿದ್ದ ಬಟ್ಟೆಗಳು ಎಂದರೆ ಸರಿಯಲ್ಲ. ನೀವು ಮಾಡಿದ ಕೃತ್ಯವನ್ನು ಮರೆ ಮಾಚುವ ಸಲುವಾಗಿ ಪಿ.ಜಿ ಆಂಟಿಯನ್ನು ಚಾಸಾ.14 ರವರೊಂದಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ಸುಳ್ಳು ಹೇಳಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಹಣಕ್ಕಾಗಿ ನಿಮ್ಮ ತಾಯಿಯನ್ನು ಪೀಡಿಸುತ್ತಿದ್ದಾಗಿ ಪ್ರಕರಣಕ್ಕಾಗಿ ಸೃಷ್ಟಿಸಿ ಹೇಳಿದ್ದೀರಿ ಎಂದರೆ ಸರಿಯಲ್ಲ.

27. ಆರೋಪಿ ನಿಮ್ಮ ತಾಯಿಯ ಬಳಿ ಖರ್ಚಿಗೆ ಹಣವನ್ನು ಕೇಳಿದಾಗ ನಿಮ್ಮ ತಾಯಿ ಹಣವನ್ನು ಕೊಡದ ಕಾರಣ ಆಕೆಯ

ತಲೆಯನ್ನು ಗೋಡೆಗೆ ಗುದ್ದಿದಾಗ ಆಕೆಯ ಕಿವಿಯಲ್ಲಿ ರಕ್ತ ಬಂದು ಕೆಳಗೆ ಬಿದ್ದಿದ್ದಾಗಿ ನಂತರ ಆಕೆಯ ಕುತ್ತಿಗೆಯನ್ನು ಹಿಸುಕಿ, ಕೈಯಿಂದ ಮುಖಕ್ಕೆ ಗುದ್ದಿ ಕಾಲಿನಿಂದ ಮುಖಕ್ಕೆ ಒದ್ದು ಆಕೆಯನ್ನು ಸಾಯಿಸಿದ್ದಾಗಿ ತಿಳಿಸಿದನು ಎಂದು ಈ ಪ್ರಕರಣದಲ್ಲಿ ಆರೋಪಿಯನ್ನು ಸಿಕ್ಕಿಸುವ ಸಲುವಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನೀವು ಮನೆಯಲ್ಲಿಯೇ ಇದ್ದೀರಿ, ನಿಮ್ಮ ತಾಯಿ ಮೃತಪಟ್ಟಿದ್ದರು, ಆರೋಪಿ ಹೊರಗಿನಿಂದ ಬಂದು ಆ ದೃಶ್ಯವನ್ನು ನೋಡಿದಾಗ ಆತ ಕಿರುಚಿಕೊಂಡನು ಎಂದರೆ ಸರಿಯಲ್ಲ. ಆರೋಪಿ ಮಾನಸಿಕ ಅಸ್ವಸ್ಥನಾಗಿದ್ದು ಆತನನ್ನು ಜೈಲಿಗೆ ಕಳುಹಿಸಿದರೆ ಜಮೀನಿನ ಎಲ್ಲಾ ಪಾಲನ್ನು ನೀವೇ ಅನುಭವಿಸಬಹುದೆಂದು ಭಾವಿಸಿ ಆರೋಪಿಯ ವಿರುದ್ಧ ಸುಳ್ಳು ಆರೋಪ ಮಾಡಿ ಸುಳ್ಳು ದೂರು ನೀಡಿದ್ದೀರಿ ಎಂದರೆ ಸರಿಯಲ್ಲ.

28. ಬಸವನಹಳ್ಳಿ ಪೊಲೀಸರು ಸ್ಥಳಕ್ಕೆ ಬಂದಾಗ ಸಂಜೆ 6.30 ಗಂಟೆಯಾಗಿತ್ತು. ಆಗ ಪೊಲೀಸರು ನನ್ನನ್ನು , ರಾಜೇಶ್ ಗೌಡ ಮತ್ತು ರುಬೆನ್ ಮೋಸೆಸ್ ರವರನ್ನು ಮತ್ತು ಅಕ್ಕಪಕ್ಕದವರನ್ನು ವಿಚಾರಿಸಿದರು. ಆ ಸಮಯದಲ್ಲಿ ಆರೋಪಿ ಪ್ರಜ್ಞೆ ತಪ್ಪಿ ಬಿದ್ದಿದ್ದನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ಆರೋಪಿಯನ್ನು ವಿಚಾರಿಸಿದ್ದಾರೆ. ಅಲ್ಲಿಗೆ ಬಂದ ಪೊಲೀಸರು ಠಾಣೆಗೆ ಬಂದು ದೂರು ಕೊಡುವಂತೆ ತಿಳಿಸಿದರು ಮತ್ತು ಆರೋಪಿಯನ್ನು ಕರೆದುಕೊಂಡು ಹೋದರು. ನಂತರ ನಾನು

ಮತ್ತು ಚಾಸಾ.14 ರವರು ಬಸವನಹಳ್ಳಿ ಪೊಲೀಸ್ ಠಾಣೆಗೆ ಹೋದೆವು. ಅಲ್ಲಿ ನಾನು ದೂರು ಕೊಟ್ಟಿದ್ದೇನೆ. ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ಆಗ ಸಮಯ ಸಂಜೆ 7.00 ಗಂಟೆಯಿಂದ 7.30 ಗಂಟೆಯಾಗಿರಬಹುದು.

29. ದೂರನ್ನು ಜೆರಾಕ್ಸ್ ಅಂಗಡಿಯೊಂದರಲ್ಲಿ ಟೈಪ್ ಮಾಡಿಸಿದ್ದೇನೆ. ಪೊಲೀಸರು ಮಹಜರ್ ಗಾಗಿ ಸ್ಥಳಕ್ಕೆ ಬಂದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಮಹಜರ್ ಮಾಡುವ ಸಮಯದಲ್ಲಿ ನಾನು ಠಾಣೆಯಲ್ಲಿ ಇದ್ದೆನು ಕಾರಣ ನನಗೆ ಸುಸ್ತಾಗಿತ್ತು.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಸಾಕ್ಷಿಯ ಮುಂದಿನ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ದಿನಾಂಕಃ 06-09-2022 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಹೆಚ್ ಟಿ ಎಸ್ ಕೆ ವಕೀಲರಿಂದಃ

30. ನಾನು ಡಿಗ್ರಿ ವ್ಯಾಸಂಗ ಮಾಡುತ್ತಿದ್ದಾಗಿನಿಂದಲೂ ಚಾಸಾ.14 ರವರು ನನ್ನ ಸ್ನೇಹಿತರಾಗಿದ್ದಾರೆ. ಚಾಸಾ.15 ರವರ ಸ್ವಂತ ಊರು ಮಲ್ಲಂದೂರು. ಚಾಸಾ.14 ನನ್ನ ಆತ್ಮೀಯ ಸ್ನೇಹಿತ. ನಮ್ಮ ಮನೆಯ ಎಲ್ಲಾ ವಿಚಾರಗಳು ಚಾಸಾ.14 ರವರಿಗೆ ಗೊತ್ತಿರುತ್ತದೆ ಎಂದರೆ ಸರಿ. ನಾನು ನನ್ನ ತಾಯಿಯೊಂದಿಗೆ ಜೊತೆ ಜಗಳ ಮಾಡುತ್ತಿದ್ದ ಸಮಯದಲ್ಲಿ ಚಾಸಾ.14 ರವರು ಸಹ ಬಿಡಿಸುತ್ತಿದ್ದರು ಎಂದರೆ ಸಾಕ್ಷಿ ಯಾವುದೇ ಜಗಳ ನಡೆದಿಲ್ಲ ಮತ್ತು ಚಾಸಾ.14 ರವರು ಬಿಡಿಸಿಲ್ಲ ಎನ್ನುತ್ತಾರೆ. ಆರೋಪಿಯನ್ನು ಆಸ್ಪತ್ರೆಗೆ ತೋರಿಸುತ್ತಿರಲಿಲ್ಲ ಮತ್ತು ಆ ವಿಚಾರ ಚಾಸಾ.14 ರವರಿಗೆ ಗೊತ್ತಿಲ್ಲ. ಆರೋಪಿ ಯಾವಾಗಲೂ ಮಾನಸಿಕ ಖಿನ್ನತೆಯಲ್ಲಿರುತ್ತಾನೆ ಆತನನ್ನು ಹೊರಗೆ ಕರೆದುಕೊಂಡು ಓಡಾಡಿಸಿ ಎಂದು ನಿಮ್ಮ ತಾಯಿ ನಿಮಗೆ ಮತ್ತು ಚಾಸಾ.14 ರವರಿಗೆ ಹೇಳುತ್ತಿದ್ದರು ಎಂದರೆ ಸರಿಯಲ್ಲ.

31. ಆರೋಪಿ ಯಾವಾಗಲೂ ಮಗುವಿನ ರೀತಿ ಒಂದೇ ಕಡೆ ಕುಳಿತುಕೊಳ್ಳುತ್ತಿದ್ದನು ಎಂದರೆ ಸರಿಯಲ್ಲ. ದೂರನ್ನು ನಾನು ಹೇಳಿ ಟೈಪ್ ಮಾಡಿಸಿದ್ದೇನೆ. ರೂಬೆನ್ ಮೋಸೆಸ್

ರವರು ನಿಮ್ಮ ಏರಿಯಾ ಕೌನ್ಸಿಲರ್ ಎಂದರೆ ನನಗೆ ಗೊತ್ತಿಲ್ಲ. ಆತ ನಮ್ಮ ಅಕ್ಕಪಕ್ಕದ ಮನೆಯವನಾಗಿದ್ದರಿಂದ ಆತನನ್ನು ನೋಡಿದ್ದೇನೆ, ಆದರೆ ನನಗೆ ಆತನ ಪರಿಚಯವಿರಲಿಲ್ಲ. ಪೊಲೀಸರು ಘಟನಾ ದಿನ ಸ್ಥಳದಲ್ಲಿ ಎಷ್ಟು ಸಮಯದವೆರೆ ಇದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಕಾರಣ ನಾನು ತಲೆ ಸುತ್ತು ಬಂದು ಬಿದ್ದಿದ್ದೆನು ಎನ್ನುತ್ತಾರೆ. ಆ ರೀತಿ ಎಷ್ಟು ಹೊತ್ತು ಪ್ರಜ್ಞೆ ಇಲ್ಲದೇ ಇದ್ದೆನು ಎಂದು ನನಗೆ ಗೊತ್ತಿಲ್ಲ. ನಾನು ಕಿರುಚಿಕೊಂಡಾಗ ಮೊದಲಿಗೆ ಚಾಸಾ.3 ರೂಬೆನ್ ಮೋಸೆಸ್ ರವರು ಬಂದರು ನಂತರ ನನಗೆ ಪ್ರಜ್ಞೆ ಇಲ್ಲದ ಸಮಯದಲ್ಲಿ ಅಲ್ಲಿಗೆ ಯಾರು ಯಾರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ, ಪ್ರಜ್ಞೆ ಬಂದಾಗ ತುಂಬಾ ಜನರು ಸೇರಿದ್ದರು. ಘಟನೆಯ ಬಳಿಕ ನಾನು ಆಸ್ಪತ್ರೆಗೆ ಹೋಗಿರಲಿಲ್ಲ.

32. ದೂರು ನೀಡಿದ ಬಳಿಕ 25 ನೇ ತಾರೀಖಿನಂದು ಪೊಲೀಸರು ನನ್ನನ್ನು ಠಾಣೆಗೆ ಪುನಃ ಫೋನ್ ಮುಖಾಂತರ ಕರೆಯಿಸಿ ವಿಚಾರಿಸಿದ್ದರು. ಆ ದಿನ ನಾನು ಒಬ್ಬನೇ ಪೊಲೀಸ್ ಠಾಣೆಗೆ ಹೋಗಿದ್ದೆನು. ಆ ದಿನ ಚಾಸಾ.14 ರವರನ್ನು ಪೊಲೀಸರು ಠಾಣೆಗೆ ಕರೆಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಇಂದಾವರ ಗ್ರಾಮದ ಬಳಿಯೇ ಹೌಸಿಂಗ್ ಬೋರ್ಡಿನ ವತಿಯಿಂದ ಸೈಟುಗಳನ್ನು ನಿರ್ಮಿಸಲಾಗಿದೆ ಎಂದರೆ ಸರಿಯಲ್ಲ. ಪೊಲೀಸ್ ಕ್ವಾ ಟರ್ಸ್ ಪಕ್ಕದಲ್ಲಿ ಸಿ ಡಿ ಎ ರವರಿಂದ ಸೈಟುಗಳನ್ನು ನಿರ್ಮಿಸಲಾಗಿದೆ ಎಂದರೆ ಸರಿ. ಇಂದಾವರ ಗ್ರಾಮಕ್ಕೆ

ಹೊಂದಿಕೊಂಡಂತೆ ಸದರಿ ಸೈಟುಗಳನ್ನು ನಿರ್ಮಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಸೈಟುಗಳಿಗೆ ಅಡಿಗೆ 800 ರೂಗಳಂತೆ ಸರ್ಕಾರ ಮೌಲ್ಯವನ್ನು ನಿಗದಿ ಮಾಡಿದೆ ಎಂದರೆ ಸರಿ.

33. 25 ನೇ ತಾರೀಖಿನ ನಂತರ ಪುನಃ ನಿವೇನಾದರೂ ಪೊಲೀಸ್ ಠಾಣೆಗೆ ಹೋಗಿದ್ದಿರಾ ಎಂದರೆ ಸಾಕ್ಷಿ ಹೋಗಿರಬಹುದು ನನಗೆ ಈಗ ನೆನಪಿಲ್ಲ ಎನ್ನುತ್ತಾರೆ. ದೂರು ನೀಡಿದ ಬಳಿಕ 25 ನೇ ತಾರೀಖಿನಂದು ಪೊಲೀಸರು ನನ್ನ ಮರು ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ದಿನಾಂಕ 25.09.2021 ರಂದು ನೀವು ಪೊಲೀಸ್ ಠಾಣೆಗೆ ಹೋಗಿ ಮರು ಹೇಳಿಕೆ ನೀಡಿದ್ದೀರಿ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಚಾಸಾ.15 ಮಮತಾಳನ್ನು ಹೋಲಿಕ್ರಾಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬಂದಿದ್ದಾಗಿ ಹೇಳಿರುವುದು ಸಹ ನೀವು ಮತ್ತು ಚಾಸಾ.14 ರವರು ಸೇರಿ ಪ್ರಕರಣಕ್ಕಾಗಿ ಸೃಷ್ಟಿಸಿರುವ ಕಥೆ ಎಂದರೆ ಸರಿಯಲ್ಲ. ಚಾಸಾ.15 ರವರು ಸುಮಾರು 15-20 ಜನ ಹುಡುಗರನ್ನು ಮನೆಯಲ್ಲಿ ಇರಿಸಿಕೊಂಡು ಪಿ.ಜಿ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ.

34. ಯಾವುದೇ ಪರವಾನಗಿಯನ್ನು ಹೊಂದದೇ ಕಾನೂನು ಬಾಹಿರವಾಗಿ ಚಾಸಾ.15 ರವರು ಪಿ.ಜಿಯನ್ನು ನಡೆಸುತ್ತಿದ್ದು ಅವರನ್ನು ರಕ್ಷಿಸುವ ಸಲುವಾಗಿ ನೀವು ಮತ್ತು ಚಾಸಾ.14 ರವರು ಸೇರಿಕೊಂಡು ಕಟ್ಟು ಕಥೆಯನ್ನು ಹೇಳಿದ್ದೀರಿ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಆರೋಪಿಯನ್ನು

ಸಿಲುಕಿಸುವ ಸಲುವಾಗಿ ಆ ದಿನ ಸುಸ್ತಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸ್ಥಳ ಪಂಚನಾಮೆಯ ಸಮಯದಲ್ಲಿ ಸ್ಥಳಕ್ಕೆ ಹೋದರೆ ಅಲ್ಲಿ ನೆರೆದಿರುವವರು ನೀವು ನಿಮ್ಮ ತಾಯಿಯೊಂದಿಗೆ ಮಾಡುತ್ತಿದ್ದ ಗಲಾಟೆಯ ವಿಚಾರವನ್ನು ಹೇಳುತ್ತಾರೆಂದು ಹೆದರಿ ನಿಮಗೆ ಸುಸ್ತಾಗಿದೆ ಎಂದು ಹೇಳಿ ನೀವು ಪೊಲೀಸ್ ಠಾಣೆಯಲ್ಲಿ ಉಳಿದುಕೊಂಡಿರುತ್ತೀರಿ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯ ಮುಂದಿನ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಾಕ್ಷಿಯ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ